ಶ್ರೀ ಕಾಗೋಡು ತಿಮ್ಮಪ್ಪ :- ತೆಂಗು ಬೆಳೆಗಾರರ ಬಗ್ಗೆ ಈ ಸರ್ಕಾರ ಅಪಾರವಾದ ಕಳಕಳಿಯನ್ನು ಇಟ್ಟುಕೊಂಡಿದೆ; ಮತ್ತು ಆ ಪ್ರಕಾರ ಕೆಲಸ ಕೂಡ ಮಾಡುತ್ತಿದೆ.

ಶ್ರೀ ಸಿ.ಚೆನ್ನಿಗಪ್ಪ :- ನಾವೂ ಕೂಡ ಸರ್ಕಾರದ ಧೋರಣೆಯನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಜಾತ್ಯಾತೀತ ಜನತಾ ದಳದ ಸದಸ್ಯರುಗಳು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಡಿ.ವಿ. ಸದಾನಂದಗೌಡ: ಇದು 5 ಕೋಟಿ ಜನರ ಸಮಸ್ಯೆ. ಅರ್ಧ ಗಂಟೆ ಕಾಲ ಇದಕ್ಕೆ ಅವಕಾಶ ಕೊಡಿ. ನಾವು ಬೇರೆ ಬೇರೆ ಜಿಲ್ಲೆಗಳಿಂದ ಬಂದಿದ್ದೇವೆ. ನಮಗೆ ಮಾತನಾಡಲು ಸಮಯ ಬೇಕು.

ಅಧ್ಯಕ್ಷರು: ಒಂದು ಪ್ರಶ್ನೆಗೆ ಅರ್ಧ ಗಂಟೆಯಾದರೆ ಹೇಗೆ ನಾವು ಮ್ಯಾನೇಜ್ ಮಾಡುವುದು? ಬೇಕಾದರೆ ಇದನ್ನು ಅರ್ಧ ಗಂಟೆ ಚರ್ಚೆಗೆ ತೆಗೆದುಕೊಳ್ಳೋಣ. ಬೇರೆ ನೋಟೀಸ್ ಕೊಡಿ. ಒಂದು ಕೆಲಸ ಮಾಡಿ, ನಿಯಮ 69ರ ಮೂಲಕವೇ ಕೊಡಿ. ನಾನು ಆಲೋ ಮಾಡುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ:- ನಿಯಮ 69ರ ಕಳೆಗೆ ತೆಗೆದುಕೊಳ್ಳತ್ತೀರಾ?

ಅಧ್ಯಕ್ಷರು: ತೆಗೆದುಕೊಳ್ಳುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ: ಯಾವಾಗ? ಬಜೆಟ್ ಮೇಲೆ ಮಾತನಾಡುವುದಕ್ಕೆ ಟೈಮ್ ಇಲ್ಲ.

ಅಧ್ಯಕ್ಷರು : ಅದು ನಮಗೆ ಬೇಕಾಗಿಲ್ಲ. ನೀವು ನೋಟೀಸ್ ಕೊಡಿ. ಒಂದು ಪ್ರಶ್ನೆಗೆ ಅರ್ಧ ಗಂಟೆಯಾದರೆ ಎರಡು ಪ್ರಶ್ನೆಗಳನ್ನು ತೆಗೆದುಕೊಳ್ಳಬಹುದು.

ಶ್ರೀ ಡಿ.ವಿ. ಸದಾನಂದಗೌಡ:- ಅರ್ಧ ಗಂಟೆ ಪ್ರಶ್ನೆಯಲ್ಲ. ಇದು ಎರಡು ದಿವಸದ ಪ್ರಶ್ನೆ ಇದು ಸರ್ಕಾರದ ವೈಫಲ್ಯ. ತೆಂಗು ಬೆಳೆಗಾರರ ಬಗ್ಗೆ ಹೇಳಬೇಡವೇ? ಸರ್ಕಾರದ ಈ ಧೋರಣೆ ಸರಿಯಲ್ಲ. ನಾವು ಸಭಾತ್ಯಾಗ ಮಾಡುತ್ತೇವೆ.

ಅಧ್ಯಕ್ಷರು :- ನಿಯಮ 69ರಡಿಯಲ್ಲಿ ಚರ್ಚಿಸಲು ನೀವು ನೋಟೀಸ್ ಕೊಡಿ. ಡೆಫನೇಟ್ ಆಗಿ ನಾನು ತೆಗೆದುಕೊಳ್ಳುತ್ತೇನೆ.

(ಗೊಂದಲ)

ಮಾನ್ಯ ಸದಸ್ಯರು : ಈ ಸರ್ಕಾರಕ್ಕೆ ತೆಂಗಿನ ಬೆಳೆಗಾರರ ಬಗ್ಗೆ ಕಾಳಜಿ ಇಲ್ಲ. ಇವರು ತೆಂಗಿನ ಬೆಳೆಗಾರರನ್ನು ನಿರ್ಲಕ್ಷ್ಯ ಮಾಡುತ್ತಿದ್ದಾರೆ. ಆದ್ದರಿಂದ ಇವರ ಧೋರಣೆಯನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಮಾನ್ಯ ಬಿಜೆಪಿ ಸದಸ್ಯರುಗಳು ಸಭಾತ್ಯಾಗ ಮಾಡಿದರು)

(ಗೊಂದಲ)